## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: 2888 |
| ಸದಸ್ಯರ ಹೆಸರು | :: ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ |
| ಉತ್ತರಿಸುವ ದಿನಾಂಕ | :: 30.03.2022 |
| ಉತ್ತರಿಸುವ ಸಚಿವರು | :: ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಕೊಂಡಜ್ಜಿ ಗ್ರಾಮದಲ್ಲಿ ಜಲದರ್ಶನಿ ಜ್ಞಾನಪೀಠ (ಲೇಕ್‌ವೀವ್ ಆಕಾಡೆಮಿ) (ರಿ) ದಾವಣಗೆರೆ ಈ ಸಂಸ್ಥೆಗೆ ಕಂದಾಯ ಇಲಾಖೆಯಿಂದ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಯಾವ ವರ್ಷದಲ್ಲಿ ಹಂಚಿಕೆ ಮಾಡಲಾಗಿದೆ; | ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಕೊಂಡಜ್ಜಿ ಗ್ರಾಮದಲ್ಲಿ ಸ.ನಂ.178ರಲ್ಲಿ 129-32 ಎಕರೆ, ಸ.ನಂ.158, 159 ಮತ್ತು 172ರಲ್ಲಿ 58-32 ಎಕರೆ, ಸ.ನಂ.150, 160 ಮತ್ತು 171ರಲ್ಲಿ 40-24 ಎಕರೆ ಸೇರಿ ಒಟ್ಟು 229-08 ಎಕರೆ ಜಮೀನನ್ನು 1977 ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ. |
| ಆ) | ಹಂಚಿಕೆ ಮಾಡಲಾದ ಜಮೀನನ್ನು ಕಂದಾಯ ಇಲಾಖೆಯು ಯಾವ ಕಾರಣಕ್ಕೆ ಹಿಂಪಡೆಯಲಾಗಿದೆ; | ಗುತ್ತಿಗೆ ನೀಡಿ ಹಂಚಿಕೆ ಮಾಡಲಾದ ಪ್ರದೇಶದಲ್ಲಿ ಯಾವ ಉದ್ದೇಶಕ್ಕಾಗಿ ನೀಡಲಾಗಿತ್ತೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳದೇ ಇರುವುದರಿಂದ ಜಮೀನನ್ನು ಹಿಂಪಡೆಯಲಾಗಿದೆ. |
| ಇ) | ಹಿಂಪಡೆಯಲಾದ ಜಮೀನನ್ನು ಯಾವ ಯಾವ ಇಲಾಖೆಗೆ ಮರು ಹಂಚಿಕೆ ಮಾಡಲಾಗಿದೆ; ಮರು ಹಂಚಿಕೆ ಮಾಡಲಾದ ಜಮೀನನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ; | ಹಿಂಪಡೆಯಲಾದ ಜಮೀನನ್ನು ಈ ಕೆಳಕಂಡ ಇಲಾಖೆ/ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದ್ದು, ಯಾವ ಉದ್ದೇಶಕ್ಕೆ ಹಂಚಿಕೆ ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆ.<br>01. ಅರಣ್ಯ ಇಲಾಖೆಗೆ-192.00 ಎಕರೆ<br>02. ಮೀನುಗಾರಿಕೆ ಇಲಾಖೆಗೆ-1.00 ಎಕರೆ<br>03. ಆಶ್ರಯ ಯೋಜನೆಗೆ-7.20 ಎಕರೆ/ಗುಂಟೆ<br>04. ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ-0.20 ಗುಂಟೆ<br>05. 28.08 ಎಕರೆ/ಗುಂಟೆ ಜಮೀನನ್ನು ಬಗರ್ ಹುಕುಂ ಸಾಗುವಳಿ ಅಡಿ ದರಖಾಸ್ತು ಮಂಜೂರು ಮಾಡಿರುವುದು ಕಂಡುಬರುತ್ತಿದೆ. |
| ಈ) | ಸದರಿ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದ್ದಲ್ಲಿ, ಕಂದಾಯ ಇಲಾಖೆಯ ವಶಕ್ಕೆ ಪಡೆಯಲಾಗಿದೆಯೇ; | ಹಿಂಪಡೆಯಲಾದ ಜಮೀನನ್ನು ಹಂಚಿಕೆ ಮಾಡಿರುವ ಇಲಾಖೆ/ಸಂಸ್ಥೆಗಳು ಹಂಚಿಕೆ ಮಾಡಿರುವ ಉದ್ದೇಶಕ್ಕೆ ಉಪಯೋಗಿಸುತ್ತಿರುವುದರಿಂದ ಹಿಂಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) | ಸದರಿ ಜಮೀನುಗಳಲ್ಲಿ ಅರಣ್ಯ ಇಲಾಖೆಗೆ ಎಷ್ಟು ಎಕರೆಯನ್ನು ಹಂಚಿಕೆ ಮಾಡಲಾಗಿದೆ; ಹಂಚಿಕೆ ಮಾಡಲಾದ ಜಮೀನುಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು) | ಅರಣ್ಯ ಇಲಾಖೆಗೆ ಪಹಣಿ ದಾಖಲೆಯಂತೆ ವಿಸ್ತೀರ್ಣ 192.00 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ ಹಾಗೂ ಅರಣ್ಯ ಇಲಾಖೆಗೆ ಹಂಚಿಕೆ ಮಾಡಲಾದ ಜಮೀನುಗಳಿಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆ ಹೊರಡಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಕಂಇ 41 ಎಲ್‌ಜಿಪಿ 2022**

(ಆರ್. ಅಶೋಕ್)
ಕಂದಾಯ ಸಚಿವರು